ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಸಂಖ್ಯೆ: ರೇರಾ/ಆಡಳಿತ/1677/2019-20/312 ದಿನಾಂಕ: 18 ನೇ ನವೆಂಬರ್ 2019

ಇವರಿಗೆ

ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

ಮಾನ್ಯರೆ,

ವಿಷಯ: ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ರ ಕಲಂ 40(1) ಅಡಿ ದಂಡ / ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವ ಬಗ್ಗೆ.

ಭಾರತ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಅನ್ನು ಜಾರಿಗೆ ತಂದಿರುತ್ತದೆ. ಅದಕ್ಕನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅನ್ನು ಪ್ರಕಟಿಸಲಾಗಿದೆ. ಇವುಗಳಲ್ಲಿ ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ:

Real Estate (Regulation and Development) Act, 2016

Section 40(1):- If a promoter or an allottee or a real estate agent, as the case may be, fails to pay any interest or penalty or compensation imposed on him, by the adjudicating officer or the Regulatory Authority or the Appellate Authority, as the case may be, under this Act or the rules and regulations made there under, it shall be recoverable from such promoter or allottee or real estate agent, in such manner as may be prescribed as an arrears of land revenue.

Karnataka Real Estate (Regulation and Development) Rules, 2017

Rule 25: Manner of recovery of interest, penalty and compensation: - Subject to the provisions of sub-section (1) of Section 40, the recovery of the amounts due as arrears of land revenue shall be carried out in the manner provided in the Karnataka Land Revenue Act, 1964 and the rules made there under.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಕೆಳಕಂಡ ದಾಖಲಾತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ:

(1) ನ್ಯಾಯನಿರ್ಣಯ ಅಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ಮುಂದೆ ದಾಖಲಾಗಿರುವ ಪ್ರಕರಣ ಸಂಖ್ಯೆ: ಸಿಎಂಪಿ/181127/0001677 ರಲ್ಲಿ ದಿನಾಂಕ 30/04/2019 ರಂದು ನೀಡಿರುವ ತೀರ್ಪು.

(2) ಸದರಿ ತೀರ್ಪಿನಂತೆ, ರೂ.7,63,923/- (ರೂಪಾಯಿ ಏಳು ಲಕ್ಷ ಅರವತ್ತು ಮೂರು ಸಾವಿರದ ಒಂಬೈನೂರ ಇಪ್ಪತ್ತು ಮೂರು ಮಾತ್ರ) ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪ್ರತಿವಾದಿಯಿಂದ ವಸೂಲು ಮಾಡುವ ಸಂಬಂಧ ನ್ಯಾಯನಿರ್ಣಯ ಅಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ಆದೇಶ ದಿನಾಂಕ 12/11/2019.

(3) ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಬೇಕಾಗಿರುವ ಮೊತ್ತಕ್ಕೆ ವಸೂಲಾತಿ ದೃಢೀಕರಣ ಪತ್ರ.

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು–560027

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರು ಪ್ರತಿವಾದಿಯಿಂದ ಪರಿಹಾರ ದೊರಕಿಸಿಕೊಡುವಂತೆ ಕೋರಿದ್ದು, ಅದರಂತೆ ರೂ.7,63,923/– (ರೂಪಾಯಿ ಏಳು ಲಕ್ಷ ಅರವತ್ತು ಮೂರು ಸಾವಿರದ ಒಂಬೈನೂರ ಇಪ್ಪತ್ತು ಮೂರು ಮಾತ್ರ) ಪರಿಹಾರವನ್ನು ಅರ್ಜಿದಾರರಿಗೆ ನೀಡುವಂತೆ ಪ್ರತಿವಾದಿಗೆ ಮೇಲ್ಕಂಡ ತೀರ್ಪಿನಲ್ಲಿ ಆದೇಶಿಸಿಸಲಾಗಿದೆ. ಆದರೆ ಪ್ರತಿವಾದಿಯು ತೀರ್ಪಿನಂತೆ ಪರಿಹಾರ ನೀಡದಿರುವ ಕಾರಣ ಪ್ರತಿವಾದಿಯಿಂದ ಪರಿಹಾರ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಿಕೊಡುವಂತೆ ಅರ್ಜಿದಾರರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಈ ಪ್ರಾಧಿಕಾರದ ದಿನಾಂಕ 12/11/2019 ರ ಆದೇಶದಂತೆ ರೂ.7,63,923/– (ರೂಪಾಯಿ ಏಳು ಲಕ್ಷ ಅರವತ್ತು ಮೂರು ಸಾವಿರದ ಒಂಬೈನೂರ ಇಪ್ಪತ್ತು ಮೂರು ಮಾತ್ರ) ಮೊತ್ತವನ್ನು ಪ್ರತಿವಾದಿಯಿಂದ ಭೂಕಂದಾಯ ಬಾಕಿ ಎಂದು ವಸೂಲು ಮಾಡಿ ಅರ್ಜಿದಾರರಿಗೆ ನೀಡುವ ಸಲುವಾಗಿ ಈ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಜಮಾ ಮಾಡುವಂತೆ ಕೋರಿದೆ.

ಖಜಾನೆ–2 ರಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ "8342–00–120–0–18–671 ಲೆಕ್ಕ ಶೀರ್ಷಿಕೆ ಖಾತೆ ಸಂಖ್ಯೆ: 26572ಎ158" ರ ಖಾತೆಗೆ ಜಮಾ ಮಾಡುವುದು. ಡಿಡಿಓ ಕೋಡ್ 99807ಂ.

ಅಥವಾ

ಸದರಿ ಎದರುದಾರರ ಇತರೆ ಸ್ಥಿರಾಸ್ತಿಗಳನ್ನು ಪತ್ತೆಹಚ್ಚಿ ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ರೇರಾ ಪ್ರಾಧಿಕಾರಕ್ಕೆ ಅಟ್ಯಾಚ್‌ಮೆಂಟ್ ಮಾಡಿ ಕಂದಾಯ ದಾಖಲೆಗಳಲ್ಲಿ ನಮೂದಿಸಿ ಪ್ರತಿಯನ್ನು ರೇರಾ ಪ್ರಾಧಿಕಾರಕ್ಕೆ ಸಲ್ಲಿಸಲು ಕೋರಿದೆ.

ಮೇಲ್ಕಂಡಂತೆ ಆದಷ್ಟು ಬೇಗ ಕ್ರಮ ವಹಿಸಿ ವರದಿ ಸಲ್ಲಿಸುವಂತೆ ತಮ್ಮನ್ನು ಕೋರಿದೆ.

ತಮ್ಮ ವಿಶ್ವಾಸಿ,

ಅಧೀನ ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಅಡಕ: ಮೇಲಿನಂತೆ (1/ ಪುಟಗಳು)

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಸಂಖ್ಯೆ: ರೇರಾ/ಆಡಳಿತ/1677/2019-20 ದಿನಾಂಕ: 18 ನೇ ನವೆಂಬರ್ 2019

ನ್ಯಾಯ ನಿರ್ಣಯಾಧಿಕಾರಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ಮುಂದೆ ದಾಖಲಾಗಿರುವ ಫಿರ್ಯಾದು ಸಂಖ್ಯೆ: ಸಿಎಂಪಿ/181127/0001677 ರಲ್ಲಿ ದಿನಾಂಕ: 30/04/2019 ತೀರ್ಪು ಮತ್ತು ದಿನಾಂಕ: 12/11/2019 ರ ಆದೇಶದಂತೆ:

ಬಾಕಿ ವಸೂಲಾತಿ ಪ್ರಮಾಣ ಪತ್ರ

ಫಿರ್ಯಾದುದಾರರು		ಪ್ರತಿವಾದಿಗಳು
Wilson S and Mrs. Lilly. W, No. 433, Behind BESCOM, Gandhipuram, Whitefield, Bengaluru – 560066.	ವಿರುದ್ಧ	Skylark Ithaca, Skylark Mansions Pvt. Ltd., 37/21, Skylark Chambers, Yellapachetty Layout, Ulsoor Road, Sivanchetti Gardens, Bengaluru – 560042.

ಮೇಲ್ಕಂಡ ಪ್ರಕರಣದಲ್ಲಿ ಪ್ರತಿವಾದಿಯಿಂದ ಫಿರ್ಯಾದುದಾರರಿಗೆ ಪಾವತಿಯಾಗ ಬೇಕಾಗಿರುವ ರೂ.7,63,923/- (ರೂಪಾಯಿ ಏಳು ಲಕ್ಷ ಅರವತ್ತು ಮೂರು ಸಾವಿರದ ಒಂಬೈನೂರ ಇಪ್ಪತ್ತು ಮೂರು ಮಾತ್ರ) ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವಂತೆ ಆದೇಶ ಹೊರಡಿಸಿದೆ.

ಸದರಿ ಮೊತ್ತವನ್ನು ಈ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಜಮಾ ಮಾಡುವಂತೆ ಕೋರಿದೆ.

1) ಖಜಾನೆ-2 ರಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ "8342-00-120-0-18-671 ಲೆಕ್ಕ ಶೀರ್ಷಿಕೆ ಖಾತೆ ಸಂಖ್ಯೆ: 26572ಎ158" ರ ಖಾತೆಗೆ ಜಮಾ ಮಾಡುವುದು. ಡಿಡಿಒ ಕೋಡ್ 99807ಂ.

ಅಥವಾ

2) ಸದರಿ ಎದರುದಾರರ ಇತರೆ ಸ್ಥಿರಾಸ್ತಿಗಳನ್ನು ಪತ್ತೆಹಚ್ಚಿ ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ರೇರಾ ಪ್ರಾಧಿಕಾರಕ್ಕೆ ಅಟ್ಯಾಚ್‌ಮೆಂಟ್ ಮಾಡಿ ಕಂದಾಯ ದಾಖಲೆಗಳಲ್ಲಿ ನಮೂದಿಸಿ ಪ್ರತಿಯನ್ನು ರೇರಾ ಪ್ರಾಧಿಕಾರಕ್ಕೆ ಸಲ್ಲಿಸಲು ಕೋರಿದೆ.

ಅಧೀನ ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ಭೂ ಕಂದಾಯ ಬಾಕಿಯಂತೆ ವಸೂಲಾತಿ ಮಾಡಲು ಕಳುಹಿಸಿರುವ ವಸೂಲಾತಿ ಪ್ರಕರಣದ ತಪಶೀಲು ಪಟ್ಟಿ (ಚೆಕ್ ಲಿಸ್ಟ್)

ಸಂಖ್ಯೆ: ರೇರಾ/ಆಡಳಿತ/1677/2019-20 ದಿನಾಂಕ: 18 ನೇ ನವೆಂಬರ್ 2019

1	ಪ್ರಸ್ತುತ ಪ್ರಕರಣದಲ್ಲಿ ಪ್ರಸ್ತಾಪಿಸಿರುವ ಮೊಬಲಗನ್ನು ವಸೂಲಾತಿ ಮಾಡಲು ಇಲಾಖೆಯ ವತಿಯಿಂದ ಕಾನೂನು ರೀತ್ಯ ಎಲ್ಲಾ ವಿಧಿವಿಧಾನಗಳನ್ನು ಅನುಸರಿಸಲಾಗಿದೆಯೇ?	ಅನುಸರಿಸಲಾಗಿದೆ
2	ಪ್ರತಿಯೊಂದು ಬಾಕಿದಾರರ ಸಂಸ್ಥೆಯ ಪ್ರಕರಣಕ್ಕೂ ಮುಖಪತ್ರ (ಕವರಿಂಗ್ ಲೆಟರ್) ಹಾಕಲಾಗಿದೆಯೇ?	ಮುಖಪತ್ರ ಹಾಕಲಾಗಿದೆ
3	ವಸೂಲಾತಿ ಪತ್ರ ತ್ರಿಪ್ರತಿಯಲ್ಲಿ ಕಳುಹಿಸಲಾಗಿದೆಯೇ?	ಇಲ್ಲ
4	ವಸೂಲಾತಿ ಪತ್ರಕ್ಕೆ ಸಮರ್ಥ/ ಸಕ್ಷಮ ಪ್ರಾಧಿಕಾರದ ಅಧಿಕಾರಿಯಿಂದ ದೃಢೀಕರಿಸಲಾಗಿದೆಯೇ?	ದೃಢೀಕರಿಸಿದೆ
5	ಪ್ರಸ್ತುತ ಪ್ರಕರಣದ ವಸೂಲಿ ಕ್ರಮಕ್ಕೆ ಸಂಬಂಧಿಸಿದಂತೆ ಬೇರೆ ಯಾವುದಾದರೂ ಕಡೆ ನ್ಯಾಯಾಲಯದಲ್ಲಿ ಪ್ಯಾರಲಲ್ ಪ್ರೊಸೀಡಿಂಗ್ಸ್ ನಡೆಯುತ್ತಿದೆಯೇ ಅಥವಾ ಈ ಹಿಂದೆ ನಡೆದಿದ್ದ ಪಕ್ಷದಲ್ಲಿ ನ್ಯಾಯಾಲಯದ ತೀರ್ಪಿನ ಪ್ರತಿ ಲಗತ್ತಿಸುವುದು.	ಇಲ್ಲ
6	ವಸೂಲಾತಿ ಪತ್ರದಲ್ಲಿ ಬಾಕಿದಾರರ ಸಂಸ್ಥೆಯ ಪೂರ್ಣ ವಿಳಾಸವನ್ನು ನಮೂದಿಸಲಾಗಿದೆಯೇ?	ನಮೂದಿಸಿದೆ
7	ಬಾಕಿದಾರಿನಿಂದ ಇಲಾಖೆಗೆ ಬರಬೇಕಾಗಿರುವ ಬಾಕಿಯು ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು?	2019
8	ಪ್ರಸ್ತುತ ಪ್ರಕರಣದಲ್ಲಿ ನಮೂದಿಸಿರುವ ಸಂಸ್ಥೆ/ಬಾಕಿದಾರರು ಹಾಲಿ ಅಸ್ಥಿತ್ವದಲ್ಲಿದೆಯೇ? ಹಾಗೂ ಸ್ಥಳದಲ್ಲಿ ವಾಸವಾಗಿದ್ದಾರೆಯೇ? ಕ್ರಮವಾಗಿ	ಅಸ್ತಿತ್ವದಲ್ಲಿದೆ
9	ಕಂದಾಯ ಇಲಾಖೆಯಲ್ಲಿ ವಸೂಲಿ ಕ್ರಮ ಜರುಗಿಸುವ ಪ್ರಕರಣಗಳಲ್ಲಿ ವಸೂಲಿ ವೆಚ್ಚವನ್ನು (ಅಂದರೆ ಹರಾಜು ಸಮಯದಲ್ಲಿ) ನಿಮ್ಮ ಇಲಾಖೆಯಿಂದ ಭರಿಸಲಾಗಿದೆಯೇ?	ಇಲ್ಲ
10	ಪ್ರಸ್ತುತ ಪ್ರಕರಣದಲ್ಲಿ ನಿಮ್ಮ ಇಲಾಖೆಯ ವತಿಯಿಂದ ಸದರಿ ಬಾಕಿದಾರರಿಗೆ ಏನಾದರೂ ಕಂತುಗಳನ್ನು ನಿಗದಿಪಡಿಸಲಾಗಿದೆಯೇ?	ಇಲ್ಲ
11	ವಸೂಲಿ ಮಾಡಿದ ಮೊಬಲಗನ್ನು ನಿಮ್ಮ ಇಲಾಖೆಗೆ ಡಿ.ಡಿ ಮೂಲಕ ಕಳುಹಿಸಿದಲ್ಲಿ ಡಿ.ಡಿ ಕಮಿಷನ್ ಹಣವನ್ನು ವಸೂಲಿ ಮಾಡಿದ ಹಣದಲ್ಲಿಯೇ ಭರಿಸಬೇಕೋ ಅಥವಾ ಬಾಕಿದಾರರಿಂದ ಭರಿಸಬೇಕೋ?	ಬಾಕಿದಾರರಿಂದ ಪಡೆದು ಭರಿಸಬೇಕು
12	ವಸೂಲಿ ಮಾಡಿದ ಮೊಬಲಗನ್ನು ಸರ್ಕಾರದ ಖಜಾನೆಗೆ ಜಮಾ ಮಾಡಿಸುವ ಅವಕಾಶವಿದ್ದರೆ ಹೆಡ್ ಆಫ್ ಅಕೌಂಟನ್ನು ನಮೂದಿಸಲಾಗಿದೆಯೇ?	ಲೆಕ್ಕ ಶೀರ್ಷಿಕೆ ಹಾಗೂ ಖಾತೆ ಸಂಖ್ಯೆ ನಮೂದಿಸಲಾಗಿದೆ
13	ಒಂದು ವೇಳೆ ಕಾರ್ಯಾಲಯದಿಂದ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ಗೆ ವಸೂಲಿಗೆ ಕಳುಹಿಸಿದ ಪ್ರಕರಣಗಳಲ್ಲಿ ಆ ದಿನಾಂಕದಿಂದ ಹಿಡಿದು ಎರಡು ತಿಂಗಳೊಳಗೆ ತಹಶೀಲ್ದಾರ್ ರವರಿಗೆ ಸಹಕಾರ ನೀಡಿ ಪೂರ್ವ ವಸೂಲಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತದೆಯೇ?	ಯಾವುದೇ ಮಾಹಿತಿ ಕೋರಿದಲ್ಲಿ ಸಹಕರಿಸಲಾಗುವುದು.
14	ಪ್ರಸ್ತುತ ಪ್ರಕರಣದಲ್ಲಿ ತಾವು ತಿಳಿಸಿರುವ ಒಟ್ಟು ಮೊಬಲಗನ್ನು ಮಾತ್ರ ವಸೂಲು ಮಾಡಬೇಕೆ? ಅಥವಾ ಬಡ್ಡಿ ಸೇರಿಸಿ ವಸೂಲು ಮಾಡಬೇಕೆ? ಬಡ್ಡಿಯದರ ಹಾಗೂ ಯಾವ ದಿನಾಂಕದಿಂದ ಲೆಕ್ಕ ಹಾಕಬೇಕೆಂಬುದರ ವಿವರ ನೀಡಿ	ಒಟ್ಟು ಬಾಕಿ ಮೊತ್ತ ರೂ.7,63,923/- ಗಳನ್ನು ವಸೂಲಿ ಮಾಡಬೇಕು.

ಅಧೀನ ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ